# ಕಂದಾಯ ಅಧಿಕಾರಿ ಉತ್ತರಹಳ್ಳಿ ವಿಭಾಗ

## ನಿಯಮ 4(1)(ಬಿ)1(i) ಕಛೇರಿಯ ರಚನೆ ಗುರಿ ಮತ್ತು ಕರ್ತವ್ಯಗಳು

ಅ. ಕಛೇರಿಯ ಹೆಸರು:– ಕಂದಾಯ ಅಧಿಕಾರಿ ಉತ್ತರಹಳ್ಳಿ ವಿಭಾಗ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಆರ್.ಬಿ.ಐ ಬಡಾವಣೆ, ಜೆ.ಪಿ.ನಗರ 7ನೇ ಹಂತ, ಬಿಬಿಎಂಪಿ ಆಫೀಸ್,

ಬೆಂಗಳೂರು–78.

ಮುಖ್ಯ ಆಯುಕ್ತರು

↓

ವಲಯ ಆಯುಕ್ತರು

↓

ಜಂಟಿ ಆಯುಕ್ತರು

↓

ಉಪ ಆಯುಕ್ತರು

↓

ಕಂದಾಯ ಅಧಿಕಾರಿ (ಉತ್ತರಹಳ್ಳಿ) ವಿಭಾಗ

↓

| | |
|---|---|
| ಸಹಾಯಕ ಕಂದಾಯ ಅಧಿಕಾರಿ (ಯಲಚೇನಹಳ್ಳಿ) | ಸಹಾಯಕ ಕಂದಾಯ ಅಧಿಕಾರಿ (ಉತ್ತರಹಳ್ಳಿ) |

ಕಂದಾಯ ಅಧಿಕಾರಿ
ಉತ್ತರಹಳ್ಳಿ / ಯಲಚೇನಹಳ್ಳಿ ಉಪವಿಭಾಗ
ಬೊಮ್ಮನಹಳ್ಳಿ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

1. **ಕಾರ್ಯಗಳು ಮತ್ತು ಕರ್ತವ್ಯಗಳು :-**

ಕಂದಾಯ ಅಧಿಕಾರಿ ಕಛೇರಿ ಉತ್ತರಹಳ್ಳಿ ವಿಭಾಗ ವ್ಯಾಪ್ತಿಯಲ್ಲಿ ಸ್ವತ್ತುಗಳನ್ನು ಕಂದಾಯ ವ್ಯಾಪ್ತಿಗೆ ತರುವುದು, ಖಾತಾ ವರ್ಗಾವಣೆ, ಖಾತಾ ನೊಂದಾವಣೆ, ಖಾತಾ ವಿಭಜನೆ ಮತ್ತು ಖಾತಾ ಒಂದುಗೂಡಿಸುವಿಕೆ ಕಡತಗಳ ಕಛೇರಿ ಆದೇಶ ನಿರ್ವಹಣೆ, ಪ್ರತಿನಿತ್ಯ ಎಲ್ಲಾ ಉಪ ವಿಭಾಗಗಳಿಂದ ಕಂದಾಯ ವಸೂಲಾತಿ ವಿವರ ಚುನಾವಣಾ ಕೆಲಸ ಮತ್ತು ಮೇಲಿನ ಅಧಿಕಾರಿಗಳು ಸೂಚಿಸುವ ಕೆಲಸಗಳ ನಿರ್ವಹಣೆ, ಜಿ.ಪಿ.ಎಸ್ ಸರ್ವೆ ಮೇಲ್ವಿಚಾರಣೆ / ಇ-ಆಸ್ತಿ ಪರಿಶೀಲನೆ, ಕಂದಾಯ ನಿರ್ಧರಣೆ ವಿರುದ್ಧ ಸಲ್ಲಿಸಲಾದ ಮೇಲ್ಮನವಿ ಅರ್ಜಿಗಳ ವಿಲೇವಾರಿ ಇತ್ಯಾದಿ.

## ಅಧಿಕಾರಿ ಮತ್ತು ಸಿಬ್ಬಂದಿಗಳ ಅಧಿಕಾರ ಮತ್ತು ಕರ್ತವ್ಯಗಳು :-

| ಕ್ರಮ ಸಂಖ್ಯೆ | ಅಧಿಕಾರಿ/ನೌಕರರ ಹುದ್ದೆಯ ವಿವರ | ಅಧಿಕಾರಿ/ನೌಕರರ ಕರ್ತವ್ಯ, ಜವಾಬ್ದಾರಿ ಹಾಗೂ ವಿವಿಧ ಕಾಯಿದೆಯಡಿ ನಿರ್ವಹಿಸುವ ಕೆಲಸ ಕಾರ್ಯಗಳ ವಿವರಗಳು |
|---|---|---|
| 1. | ಕಂದಾಯ ಅಧಿಕಾರಿ | ❖ ಕಂದಾಯ ಅಧಿಕಾರಿಯವರ ಪ್ರಮುಖ ಕರ್ತವ್ಯ, ಕಂದಾಯ ಮೌಲ್ಯ ಮಾಪನ ಹಾಗೂ ಆಸ್ತಿ ತೆರಿಗೆ ವಸೂಲಾತಿ ಮೇಲ್ವಿಚಾರಣೆ ಮಾಡುವುದು.<br>❖ ಸಹಾಯಕ ಕಂದಾಯ ಅಧಿಕಾರಿ, ಕಂದಾಯ ಮೌಲ್ಯಮಾಪಕರು, ಕಂದಾಯ ಪರಿವೀಕ್ಷಕರು ಹಾಗೂ ಕಂದಾಯ ವಸೂಲಿಗಾರರ ಕರ್ತವ್ಯದ ಲೋಪದೋಷಗಳ ಬಗ್ಗೆ ಮೇಲಾಧಿಕಾರಿಗಳಿಗೆ ವರದಿ ಮಾಡುವುದು.<br>❖ ಹೊಸದಾಗಿ ಕಂದಾಯ ನಿಗಧೀಕರಣ ಬಗ್ಗೆ ಕಟ್ಟಡಗಳ ಪರಿಶೀಲನೆ.<br>❖ ಹಳೆಯ ಕಟ್ಟಡಗಳ ಕಂದಾಯದ ಪರಿಷ್ಕರಣೆ ಮಾಡುವುದು<br>❖ ತೆರಿಗೆ ಅಪೀಲು ಸ್ಥಾಯಿ ಸಮಿತಿಯ ಸಭೆಗೆ ಹಾಜರಾಗುವುದು.<br>❖ ಕಂದಾಯ ಇಲಾಖೆಯ ಎಲ್ಲಾ ವ್ಯವಹಾರಗಳನ್ನು ಕಾರ್ಯಗತಗೊಳಿಸುವುದು ಆಗಾಗ್ಗೆ ಕಂದಾಯ ಬಾಕಿ ವಿವರಗಳ ಪಟ್ಟಿ ಮಾಡಿ ಮೇಲಾಧಿಕಾರಿಗಳಿಗೆ ವರಧಿ ಮಾಡುವುದು.<br>❖ ತಮ್ಮ ವ್ಯಾಪ್ತಿಗೆ ಬರುವಂತಹ ಸಿಬ್ಬಂದಿಗಳಿಗೆ ಕೆಲಸ ಕಾರ್ಯಗಳನ್ನು ಹಂಚುವುದು ಹಾಗೂ ಅಧೀನ ಸಿಬ್ಬಂದಿಗಳಿಗೆ ವೇತನ ಬಟವಾಡೆ ಮಾಡುವುದು.<br>❖ ಕಂದಾಯ ಅಧಿಕಾರಿಯವರು ಪ್ರತಿ ವಾರಾಂತ್ಯದಲ್ಲಿ ತಮ್ಮ ದಿನಚರಿಯನ್ನು ಮೇಲಾಧಿಕಾರಿಯವರಿಗೆ ಸಲ್ಲಿಸುವುದು.<br>❖ ಜಿ.ಪಿ.ಎಸ್ ಸರ್ವೆ ಮೇಲ್ವಿಚಾರಣೆ/ಇ-ಆಸ್ತಿ ಪರಿಶೀಲನೆ ಮಾಡುವುದು. |

ಕಂದಾಯ ಅಧಿಕಾರಿ
ಉತ್ತರಹಳ್ಳಿ / ಯಲಚೇನಹಳ್ಳಿ ಉಪವಿಭಾಗ
ಬೊಮ್ಮನಹಳ್ಳಿ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**2. ಮೇಲ್ವಿಚಾರಣೆ ಮತ್ತು ಜವಾಬ್ದಾರಿಗಳನ್ನು ಒಳಗೊಂಡಂತೆ ತೀರ್ಮಾನ ಕೈಗೊಳ್ಳುವಲ್ಲಿ ಅನುಸರಿಸುವ ಕ್ರಮಗಳು :-**

ಕಛೇರಿಯ ಸಿಬ್ಬಂದಿಗಳು ಸಾರ್ವಜನಿಕರಿಂದ ಹಾಗೂ ಸಹಾಯಕ ಕಂದಾಯ ಅಧಿಕಾರಿಗಳಿಂದ ಬಂದಂತಹ ಖಾತಾ ನೊಂದಾವಣೆ, ವರ್ಗಾವಣೆ, ವಿಭಜನೆ ಹಾಗೂ ಒಂದುಗೂಡಿಸುವ ಸಂಬಂಧ ಕಂದಾಯ ಅಧಿಕಾರಿಗಳು ಉತ್ತರಹಳ್ಳಿ ವಿಭಾಗ ರವರಿಗೆ ವರದಿ ನೀಡಿ ಸದರಿ ಅಧಿಕಾರಿಯವರಿಂದ ಅನುಮೋದನೆ ಪಡೆದ ನಂತರ ಕಡತವನ್ನು ಅಧಿಕಾರಿಗಳ ಆದೇಶದಂತೆ ಕ್ರಮವಹಿಸುವುದು. ಮೇಲ್ಮನವಿಗಾಗಿ ಬಂದಂತಹ ಪ್ರಕರಣಗಳನ್ನು ಪರಿಶೀಲಿಸಿ ತೀರ್ಮಾನಕ್ಕಾಗಿ ಮೇಲಾಧಿಕಾರಿಗಳಿಗೆ ವರದಿ ಮಾಡಿ ಮೇಲಾಧಿಕಾರಿಗಳ ತೀರ್ಮಾನವನ್ನು ಅಪೀಲುದಾರರಿಗೆ ಮಾಹಿತಿ ನೀಡುವುದು.

**3. ಕಾರ್ಯನಿರ್ವಹಿಸುವಲ್ಲಿ ಅನುಸರಿಸುವ ಮಾನದಂಡಗಳು :-**

ಮುಖ್ಯ ಆಯುಕ್ತರು, ವಿಶೇಷ ಆಯುಕ್ತರು (ಕಂದಾಯ), ವಲಯ ಆಯುಕ್ತರು (ಬೊಮ್ಮನಹಳ್ಳಿ), ಜಂಟಿ ಆಯುಕ್ತರು (ಕಂದಾಯ)/(ಬೊಮ್ಮನಹಳ್ಳಿ) ರವರುಗಳು ಕಾಲಕಾಲಕ್ಕೆ ನೀಡುವ ಆದೇಶ ಹಾಗೂ ಸೂಚನೆಗಳನ್ನು ಪಾಲಿಸಿ ಕ್ರಮವಹಿಸಲಾಗುವುದು.

4. ಅದರ ಕಾರ್ಯಗಳನ್ನು ನೆರವೇರಿಸುವುದಕ್ಕಾಗಿ ಅದು ಹೊಂದಿರುವ ಅಥವಾ ನಿಯಂತ್ರಣದಲ್ಲಿರುವ ಅಥವಾ ಉದ್ಯೋಗಿಗಳು ಬಳಸುವ ನಿಯಮಗಳು ವಿನಿಯಮಗಳು ಅನುಸೂಚಿಗಳು, ಕೈಪಿಡಿಗಳು ಮತ್ತು ದಾಖಲೆಗಳನ್ನು, ಮುಖ್ಯ ಆಯುಕ್ತರು ನೀಡಿರುವ ಸೂಚನೆಗಳು.

**5. ಅದರ ಕಾರ್ಯನೀತಿಯ ರಚನೆ ಅಥವಾ ಅದರ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರೊಡನೆ ಸಮಾಲೋಚಿಸಲು ಅಥವಾ ಅವರ ಪ್ರಾತಿನಿಧ್ಯವಿರುವಂತೆ ಮಾಡಲು ಇರುವಂಥ ಯಾವುದೇ ವ್ಯವಸ್ಥೆ ವಿವರಗಳು:-**

ಸಹಾಯಕ ಕಂದಾಯ ಅಧಿಕಾರಿ ಉತ್ತರಹಳ್ಳಿ /ಯಲಚೇನಹಳ್ಳಿ ಉಪ ವಿಭಾಗ ವ್ಯಾಪ್ತಿಯ ಸ್ವತ್ತುಗಳ ಖಾತಾ ವರ್ಗಾವಣೆ, ನೊಂದಾವಣೆ, ವಿಭಜನೆ ಹಾಗೂ ಒಂದುಗೂಡಿಸುವ ಸಂಬಂಧ ಹಾಗೂ ಸ್ವತ್ತುಗಳ ತೆರಿಗೆ ನಿರ್ಧರಣೆ ವಿರುದ್ಧ ಸಲ್ಲಿಸಲಾದ ಮೇಲ್ಮನವಿಗಳನ್ನು ನಿಗದಿತ ಕಾಲಮಿತಿಯಲ್ಲಿ ವಿಲೇವಾರಿ ಮಾಡುವುದು.

ಕಂದಾಯ ಅಧಿಕಾರಿ
ಉತ್ತರಹಳ್ಳಿ / ಯಲಚೇನಹಳ್ಳಿ ಉಪವಿಭಾಗ
ಬೊಮ್ಮನಹಳ್ಳಿ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

6. ಕಛೇರಿಯ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದ ನಿರ್ದೇಶಿಕೆ :-

| ಕ್ರ.ಸಂ | ಹೆಸರು ಮತ್ತು ಹುದ್ದೆ | ಕಛೇರಿ ವಿಳಾಸ | ದೂರವಾಣಿ |
|---|---|---|---|
| 1. | ಶ್ರೀಮತಿ. ಗುಲ್ತಾಜ್ ಫಾತೀಮಾ .ಹೆಚ್, ಕಂದಾಯ ಅಧಿಕಾರಿ | ಆರ್.ಬಿ.ಐ ಬಡಾವಣೆ, ಜೆ.ಪಿ.ನಗರ 7ನೇ ಹಂತ, ಬಿಬಿಎಂಪಿ ಆಫೀಸ್, ಬೆಂಗಳೂರು-78. | 9480684406 |

7. ನಿಯಮಾನುಸಾರ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಪಡೆಯುತ್ತಿರುವ ಮಾಸಿಕ ವೇತನದ ವಿವರಗಳು :-

| ಕ್ರ.ಸಂ | ಹೆಸರು ಮತ್ತು ಹುದ್ದೆ | ವೇತನ ಶ್ರೇಣಿ | ಮೂಲ ವೇತನ |
|---|---|---|---|
| 1 | ಶ್ರೀಮತಿ. ಗುಲ್ತಾಜ್ ಫಾತೀಮಾ.ಹೆಚ್, ಕಂದಾಯ ಅಧಿಕಾರಿ | 52650-97100 | 61150 |

ಕಂದಾಯ ಅಧಿಕಾರಿ
ಉತ್ತರಹಳ್ಳಿ / ಯಲಚೇನಹಳ್ಳಿ ಉಪವಿಭಾಗ
ಬೊಮ್ಮನಹಳ್ಳಿ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

8. ಹಂಚಿಕೆ ಮಾಡಲಾದ ಮೊಬಲಗನ್ನೊಳಗೊಂಡು, ಸಹಾಯಧನ ಕಾರ್ಯಕ್ರಮಗಳ ಜಾರಿಯ ವಿಧಾನವನ್ನು ಅಂತಹ ಕಾರ್ಯಕ್ರಮಗಳ ಫಲಾನುಭವಿಗಳ ವಿವರಗಳನ್ನು:-

**ಯಾವುದೂ ಇಲ್ಲ**

9. ಅದು ನೀಡಿರುವ ರಿಯಾಯಿತಿಗಳನ್ನು ಅನುಮತಿ ಪತ್ರಗಳನ್ನು ಅಥವಾ ಅಧಿಕಾರ ಪತ್ರಗಳನ್ನು ಪಡೆಯುವವರ ವಿವರಗಳು:-

**ಯಾವುದೂ ಇಲ್ಲ**

10. ಅದರ ಬಳಿ ಲಭ್ಯವಿರುವ ಅಥವಾ ಅದು ಹೊಂದಿರುವ ವಿದ್ಯುನ್ಮಾನ ರೂಪಕ್ಕೆ ಪರಿವರ್ತಿಸಿರುವ ಮಾಹಿತಿಗೆ ಸಂಬಂಧಿಸಿದ ವಿವರಗಳು:-

**ಯಾವುದೂ ಇಲ್ಲ**

11. ಸಾರ್ವಜನಿಕ ಉಪಯೋಗಕ್ಕಾಗಿ ಗ್ರಂಥಾಲಯವನ್ನು ಅಥವಾ ವಾಚನಾಲಯವನ್ನು ನಿರ್ವಹಿಸುತ್ತಿದ್ದಲ್ಲಿ ಅದರ ಕೆಲಸದ ಸಮಯವನ್ನೊಳಗೊಂಡಂತೆ ಮಾಹಿತಿ ಪಡೆಯಲು ಸಾರ್ವಜನಿಕರಿಗೆ ಲಭ್ಯವಿರುವ ಸೌಲಭ್ಯಗಳ ವಿವರಗಳು:-

**ಯಾವುದೂ ಇಲ್ಲ**

12. ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರುಗಳು, ಪದನಾಮಗಳು ಮತ್ತು ಇತರ ವಿವರಗಳನ್ನು:-

ಕಂದಾಯ ಅಧಿಕಾರಿ, ಉತ್ತರಹಳ್ಳಿ ವಿಭಾಗ, ಆರ್.ಬಿ.ಐ ಬಡಾವಣೆ, ಜೆ.ಪಿ.ನಗರ 7ನೇ ಹಂತ, ಬಿಬಿಎಂಪಿ ಆಫೀಸ್, ಬೆಂಗಳೂರು-78.

13. ನಿಯಮಿಸಬಹುದಾದಂತಹ ಇತರ ಮಾಹಿತಿಯನ್ನು ಪ್ರಕಟಿಸತಕ್ಕದ್ದು ಮತ್ತು ಆ ತರುವಾಯ ಪ್ರತಿವರ್ಷ ಈ ಪ್ರಕಟಣೆಗಳನ್ನು ಅಂದಿನವರೆಗೆ ಪರಿಷ್ಕರಿಸತಕ್ಕದ್ದು.

14. ಪಾಲಿಕೆ ವತಿಯಿಂದ ಯಾವುದಾದರೂ ಮಾಹಿತಿಗಳನ್ನು ನಿಗಧಿಗೊಳಿಸಿದಲ್ಲಿ ಅದನ್ನು ಅಳವಡಿಸಲಾಗುವುದು.

ಕಂದಾಯ ಅಧಿಕಾರಿ

ಕಂದಾಯ ಅಧಿಕಾರಿ, ಉತ್ತರಹಳ್ಳಿ ವಿಭಾಗ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಬೊಮ್ಮನಹಳ್ಳಿ ವಲಯ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ